# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 1487 / 2024

ಸಿಡಬ್ಲ್ಯೂ- 01
ಪಿಡಬ್ಲ್ಯೂ-01

ದಿನಾಂಕಃ **03.04.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ನಿಂಗಪ್ಪ |
| ತಂದೆಯ/ಗಂಡನ ಹೆಸರುಃ | - | ತಿಮ್ಮಣ್ಣ |
| ವಯಸ್ಸುಃ | -? | **60** ವರ್ಷ |
| ಉದ್ಯೋಗಃ | - | ಒಕ್ಕಲುತನ. |
| ವಾಸಸ್ಥಳಃ | - | ಯರಗೋಳ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಮೃತ ಚಂದ್ರಶೇಖರ ನನ್ನ ಮಗ ಇರುತ್ತಾನೆ. ಕಳೆದ 1 ವರ್ಷದ ಹಿಂದೆ ನನ್ನ ಮಗನಿಗೆ ಅಪಘಾತ ಆಗಿತ್ತು ಆವಾಗ ನಾನು ಯರಗೋಳ ಗ್ರಾಮದಲ್ಲಿ ಇದ್ದೆ. ನನ್ನ ಇನ್ನೂಳಿದ ಮಕ್ಕಳು ಅಪಘಾತದ ವಿಷಯವನ್ನು ನನಗೆ ತಿಳಿಸಿದ್ದರು. ನಂತರ ನಾನು ಕಲಬುರಗಿ ಅಸ್ಪತ್ರೆಗೆ ಹೋಗಿದ್ದೆ. ಅಪಘಾತ ಆದ ಕುರಿತು ನಾನು ದೂರನ್ನು ಕೊಟ್ಟಿರುವುದಿಲ್ಲ. ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ದೂರ ಆಗಿದ್ದು ಸದರಿ ದಾಖಲೆಯನ್ನು ನಿಪಿ 1 ಎಂದು ಗುರುತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಅಪಘಾತವು ಹೇಗೆ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಅಪಘಾತವು ಯಾರ ತಪ್ಪಿ ನಿಂದ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಅದು ಹೇಗೆ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ನಿಪಿ 1 ರ ಮೇಲೆ ನಾನು ಸಹಿ ಮಾಡಿದ್ದೆ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>

ದಿನಾಂಕಃ 26.01.2024 ರಂದು ರಾತ್ರಿ 8-30 ಗಂಟೆಗೆ ನಾನು ಹಾಗೂ ನನ್ನ ಹೆಂಡತಿಯು ಮನೆಯಲ್ಲಿ ಇದ್ದಾಗ ನಮ್ಮ ಊರಿನ ಸಂಬಂಧಿಕರಾದ ಚಾಸಾ-6 ರವರು ಫೋನ್ ಕರೆ ಮಾಡಿ ತಾನು ಯಾದಗಿರಿ ಕೆಲಸದ ನಿಮಿತ್ತ ಬಂದಿದ್ದೆ. ನಾನು ಕೆಲಸವನ್ನು ಮುಗಿಸಿ ಯರಗೋಳಕ್ಕೆ ಬರುವಾಗ ಯಾದಗಿರಿಯ ಸುಭಾಸ ವೃತ್ತದ ಹತ್ತಿರ ನಿಂತಾಗ ನಿನ್ನ ಮಗನಾದ ಚಂದ್ರಶೇಖರ ಇತನ್ನು ತನ್ನ ಮೋಟಾರು ಸೈಕಲ್ ನಂಃಕೆಎ-33-ಇಬಿ-9638 ನೇದ್ದನ್ನು ಚಲಾಯಿಸಿಕೊಂಡು ಬಂದು ಆತನನ್ನು ನೋಡಿ ನಾನು ಆತನಿಗೆ ಎಲ್ಲಿಗೆ ಹೊರಟಿದ್ದೀಯ ಎಂದು ಕೇಳಲಾಗಿ ಆತನ್ನು ಯರಗೋಳಕ್ಕೆ ಹೋಗುತ್ತಿದ್ದೇನೆ ಎಂದು ತಿಳಿಸಿದ್ದನ್ನು. ಆಗ ನಾನು ಸಹ ಊರಿಗೆ ಬರುತ್ತೇನೆ ಎಂದು ಹೇಳಿ ಆತನ ಮೋಟಾರ ಸೈಕಲ್ ನ ಹಿಂಬದಿಯ ಸವಾರನ್ನಾಗಿ ನಾವಿಬ್ಬರು ಯರಗೋಳಕ್ಕೆ ಹೊರಟಿದ್ದೇವು ಮಾರ್ಗದ ಮಧ್ಯ ಯಾದಗಿರಿಯ ಗ್ರೀನ್ ಸಿಟಿ ಹತ್ತಿರ ನಿಮ್ಮ ಮಗನಿಗೆ ಮೋಟರು ಸೈಕಲ್ ನ್ನು ರಸ್ತೆಯ ಬದಿಗೆ ನಿಲ್ಲಿಸು ನಾನು ಮೂತ್ರ ವಿಸರ್ಜನೆಗೆ ಹೋಗಬೇಕೆಂದು ನಾನು ಆತನಿಗೆಹೇಳಿದ್ದೆ ಆತನ್ನು ಸದರಿ ವಾಹನವನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿದಾಗ ನಾನು ಮೂತ್ರ ವಿಸರ್ಜನೆ ಮಾಡುತ್ತಿದ್ದಾಗ ನಿಮ್ಮ ಮಗನು ಮೋಟಾರು ಸೈಕಲ್ ಮೇಲೆ ಕುಳಿತ್ತಿದ್ದು ನಂತರ ನಾನು ಮೋಟರು ಸೈಕಲ್ ಬಳಿ ಬಂದು ನೋಡಿದಾಗ ನವಿಬ್ಬರು ನೋಡವಷ್ಟರಲ್ಲಿ ವಾಡಿಕಡೆಯಿಂದ ಯಾದಗಿರಿ ಕಡೆಗೆ ಒಬ್ಬ ಮೋಟಾರು ಸೈಕಲ್ ಸವಾರನ್ನು ತನ್ನ ವಾಹನವನ್ನು ಅತೀ ವೇಗ ಮತ್ತು ಅಲಕ್ಷ್ಯತನದಿಂದ ಚಲಾಯಿಸಿಕೊಂದು ಬಂದು ತನ್ನ ಮುಂದೆ ಹೊರಟಿದ ಲಾರಿಯನ್ನು ಓವರ್ ಟೇಕ್ ಮಾಡುವ ಸಲುವಾಗಿ ತನ್ನ ವಾಹನದ ನಿಯಂತ್ರಣ ಕಳೆದುಕೊಂಡು ರಸ್ತೆಯ ಬದಿಯಲ್ಲಿ ನಿಂತಿದ ನಮ್ಮ ಮೋಟಾರು ಸೈಕಲ್ ಗೆ ಡಿಕ್ಕಿಪಡಿಸಿದನು ಆಗ ಮೋಟಾರು ಸೈಕಲ್ ಮೇಲೆ ಕುಳಿತಿ ನಿಮ್ಮ ಮಗನು ಮೋಟಾರು ಸಮೇತ ರಸ್ತೆಯ ಮೇಲೆ ಬಿದ್ದಾಗ ನಾನು ಲೈಟಿನ ಬೆಳಕಿನ ಮೂಲಕ ನೋಡಿದಾಗ ನಿಮ್ಮ ಮಗನಿಗೆ ತಲೆಗೆ ಭಾರೀ ಒಳಪೆಟ್ಟಾಗಿತ್ತು, ಬಲಗಾಲಿನ ಮೊಣಕಾಲಿನ ಕೆಳಗೆ ಗುಪ್ತಗಾಯಗಳು ಆಗಿದ್ದವು ಮತ್ತು ಬಲಗೈಗೆ ತರಚಿದ ಗಾಯಗಳು ಆಗಿರುತ್ತವೆ ಹಾಗೂ ನಿಮ್ಮ ಮಗನಿಗೆ ತಲೆಗೆ ಪೆಟ್ಟಾಗಿದ್ದರಿಂದ ಆತನ್ನು ಮುರ್ಚೆಹೋಗಿದ್ದನ್ನು ಮತ್ತು ಅಪಘಾತ ಪಡಿಸಿದ ಮೋಟರು ಸೈಕಲ್ ಸವಾರನ್ನು ಅಪಘಾತ ಸ್ಥಳದಲ್ಲಿ ಇದ್ದು ಸದರಿ ವಾಹನವು ಬಜಾಜ್ ಪಲ್ಸರ್ ಮೋಟರು ಸೈಕಲ್ ನಂಃಕೆಎ-33-ಇಬಿ-3184 ಇರುತ್ತದೆ ಮತ್ತು ಸದರಿ ಬಜಾಜ್ ಪಲ್ಸರ್ ವಾಹನದ ಸವಾರನ ಹೆಸರು ಮಲ್ಲಪ್ಪ ತಂದೆ ಸಣ್ಣ ತಿಮ್ಮಣ್ಣ ನವಲಗುಡ್ಡ ಸಾಃ ಯರಗೋಳ ಇತನ್ನು ಇರುತ್ತಾನೆ ಮತ್ತು ಆತನ ಸೊಂಟಕ್ಕೆ ಗಾಯಗಳು ಆಗಿದ್ದವು. ಸದರಿ ಅಪಘಾತವು ರಾತ್ರಿ 7-45 ಗಂಟೆಗೆ ಜರಗಿದ್ದು ನಾನು ನಿಮ್ಮ ಮಗನನ್ನು ಒಂದು ಖಾಸಗಿ ಆಟೋದಲ್ಲಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೊಗುತ್ತಿದ್ದೇನೆ ನೀವು ಅಲ್ಲಿಗೆ ಬನ್ನಿ ಎಂದು ತಿಳಿಸಿದ್ದನ್ನು ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಬಂದು ನೋಡಲಾಗಿ ನನ್ನ

ಮಗನು ಚಿಕಿತ್ಸೆಯನ್ನು ಪಡೆದುಕೊಳ್ಳುತ್ತಿದ್ದನ್ನು ಹಾಗೂ ಆತನ ಪ್ರಜ್ಞೆಯಲ್ಲಿ ಇರಲಿಲ್ಲ ಆತನ ಹೆಚ್ಚಿನ ಉಪಚಾರಕ್ಕಾಗಿ ನಾವು ಆತನನ್ನು ಯಾದಗಿರಿಯ ಶರಣಬಸವೇಶ್ವರ ಆಸ್ಪತ್ರೆಗೆ ಕರೆದುಕುೊಂಡು ಬಂದು ಸೇರಿಕೆ ಮಾಡಿದ್ದು, ನಂತರ ತಲೆಗೆ ಬಲವಾದ ಪೆಟ್ಟು ಆಗಿದ್ದರಿಂದ ಆತನನ್ನು ಕೂಡಲೇ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿದ್ದರಿಂದ ನಾವು ಕಲಬುರಗಿಗೆ ಯುನೈಟೆಡ್ ಆಸ್ಪತ್ರೆಗೆ ದಾಖಲಿಸಿದ್ದೇವು ಎಂದರೆ ಸರಿ. ಸದರಿ ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ 1ರಂತೆ ನಾನು ದೂರನ್ನು ನೀಡಿದ್ದರು ಸಹ ಆರೋಪಿತನಿಗೆ ಸಹಾಯ ಮಾಡಲು ದೂರನ್ನು ನೀಡಿರುವುದಿಲ್ಲ ಎಂದು ಸುಳ್ಳು ಸಾಕ್ಷ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಹಾಗೂ ಆರೋಪಿತನು ರಾಜೀ ಮಾಡಿಕೊಂಡಿರುವ ಕಾರಣ ಅಭಿಯೋಜನೆಗೆ ವಿರುದ್ಧವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ವಿ.ವಿ.ಕೆ. ರವರಿಂದಃ

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.